# SINDHI HIGH SCHOOL, HEBBAL

**Periodic Test - 2 [2025-26]**

**Subject: L2 Kannada**

**Class: VIII** | **Max. Marks: 50**

**Date: 15/12/2025** | **Reading time: 8:30 am to 8:45 am**

**No. of sides: 4** | **Writing Time: 8:45 am to 10:45 am**

---

**ಸೂಚನೆಗಳು:**

- ಪ್ರಶ್ನೆಪತ್ರಿಕೆಯಲ್ಲಿ ಒಟ್ಟು 10 ಮುಖ್ಯ ಪ್ರಶ್ನೆಗಳಿರುತ್ತವೆ.
- ಪ್ರತಿಯೊಂದು ಪ್ರಶ್ನೆಗಳ ಸೂಚನೆಗಳನ್ನು ಸರಿಯಾಗಿ ಓದಿಕೊಂಡು ಉತ್ತರಿಸಿ.
- ಪ್ರಶ್ನೆ ಮತ್ತು ಉಪಪ್ರಶ್ನೆಗಳ ಸಂಖ್ಯೆಯನ್ನು ತಪ್ಪಿಲ್ಲದೆ ಬರೆಯಿರಿ.

| | |
|---|---|
| **ವಾಚನ ಮತ್ತು ಗ್ರಹಿಕಾ ಕೌಶಲ್ಯ** | **10 ಅಂಕಗಳು** |
| **ಅನ್ವಯಿಕ ವ್ಯಾಕರಣ** | **08 ಅಂಕಗಳು** |
| **ಬರವಣಿಗೆ ಕೌಶಲ್ಯ** | **08 ಅಂಕಗಳು** |
| **ಪಠ್ಯಗಳ ಅಧ್ಯಯನ** | **24 ಅಂಕಗಳು** |
| **ಒಟ್ಟುಅಂಕಗಳು** | **50 ಅಂಕಗಳು** |

---

**I. ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **(5x1=5)**

ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಶ್ರಮಿಸಿದವರಲ್ಲಿ ಕಲ್ಯಾಣಮ್ಮ ಅವರೂ ಒಬ್ಬರು. ಇವರು ಬೆಂಗಳೂರಿನಲ್ಲಿ ೧೮೯೨ರಲ್ಲಿ ಜನಿಸಿದರು. ಅವರು ಪ್ರಾಥಮಿಕ ಶಿಕ್ಷಣವನ್ನು ಆರ್ಯಬಾಲಿಕಾ ಪಾಠ ಶಾಲೆಯಲ್ಲಿ ಪಡೆದರು. ಓದುತ್ತಿರುವಾಗಲೇ ಅವರ ಮದುವೆಯಾಯಿತು. ಮದುವೆಯಾಗಿ ಎರಡು-ಮೂರು ತಿಂಗಳೊಳಗೇ ವಿಧವೆ ಆದರು. ಆದರೂ ಎದೆಗುಂದಲಿಲ್ಲ. ಅವರು ಮನೆಯಲ್ಲಿಯೇ ಓದಿ ಎಲ್.ಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು.

ಕಲ್ಯಾಣಮ್ಮ ಅವರು 'ಮಕ್ಕಳಕೂಟ' ವನ್ನು ೧೯೩೭ರ ಏಪ್ರಿಲ್ ೨೯ರಂದು ಸ್ಥಾಪಿಸಿದರು. ಕಾರ್ಯಕ್ರಮಗಳನ್ನು ನಡೆಸಲು ಹಣದ ಕೊರತೆಯಿತ್ತು. ಅವರು ಒಮ್ಮೆ ಒಬ್ಬ ಮಹನೀಯರ ಬಳಿ ಹೋದಾಗ ಅವರು ನೇರವಾಗಿ "ಮಕ್ಕಳಿಲ್ಲದ ನೀವ್ಯಾಕಮ್ಮ ಊರ ಮಕ್ಕಳನ್ನೆಲ್ಲ ಕಟ್ಟಿಕೊಂಡು ಒದ್ದಾಡುತ್ತೀರಿ?'' ಎಂದರು ಇನ್ನೊಮ್ಮೆ ಒಬ್ಬಾಕೆ "ನಿಮಗೆ ಎಷ್ಟು ಜನ ಮಕ್ಕಳು?'' ಎಂದು ವ್ಯಂಗ್ಯವಾಗಿ ಕೇಳಿದರು. ಅವರು "ನಮ್ಮ ಮಕ್ಕಳ ಕೂಟದಲ್ಲಿ ನೂರಾರು ಮಕ್ಕಳಿದ್ದಾರೆ. ಅವರಲ್ಲದೆ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಓದುತ್ತಿರುವವರೆಲ್ಲಾ ನನ್ನ ಮಕ್ಕಳೇ ಅಲ್ಲವೇ?'' ಎಂದರು. ಕಲ್ಯಾಣಮ್ಮ ಅವರು ಮಕ್ಕಳ ಧರ್ಮಕ್ಕೆ ತಕ್ಕಂತಹ ಪಠ್ಯಪುಸ್ತಕವನ್ನು ರಚಿಸುವ ಕಾರ್ಯಗಾರಗಳಲ್ಲಿ ಭಾಗಿಯಾದರು. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಮೊದಲ ಮಹಿಳಾ ಸದಸ್ಯೆಯೂ ಆದರು. ಇವರ ವ್ಯಕ್ತಿತ್ವವನ್ನು ಗುರುತಿಸಿ ಮೈಸೂರು ಸರ್ಕಾರ ಗೌರವ ನ್ಯಾಯಾಧೀಶರನ್ನಾಗಿ ನೇಮಿಸಿತು. ಇಂತಹ ಗೌರವವನ್ನು ಪಡೆದವರಲ್ಲಿ ಇವರೇ ಮೊದಲಿಗರು.

ಇವರ ಕಾರ್ಯದಕ್ಷತೆಯನ್ನು ಗಮನಿಸಿ ಮೈಸೂರು ಸರ್ಕಾರ ಪ್ರಜಾಪ್ರತಿನಿಧಿ ಸಭೆಗೆ ಸದಸ್ಯೆಯನ್ನಾಗಿ ನೇಮಿಸಿತು. ೧೯೩೮ರಲ್ಲಿ ಬೆಂಗಳೂರು ನಗರ ಸಭೆಯ ಉಪಾಧ್ಯಕ್ಷೆಯೂ ಆದರು.

ಕಲ್ಯಾಣಮ್ಮ ಅವರು ಯಾವಾಗಲೂ ಮಹಿಳೆಯರ ಏಳಿಗೆಯ ಬಗ್ಗೆಯೇ ಆಲೋಚಿಸುತ್ತಿದ್ದರು. ಅವರಿಗೆ ಆರ್ಥಿಕ ಸ್ವಾತಂತ್ರ್ಯ ಬೇಕು. ಅದಕ್ಕೆ ಪೂರಕವಾಗಿ ವಿದ್ಯಾಭ್ಯಾಸ ಮುಖ್ಯ ಎಂದು ಭಾವಿಸಿದ್ದರು. ಅದಕ್ಕಾಗಿ ೧೯೧೩ರಲ್ಲಿ 'ಶ್ರೀ ಶಾರದ ಸ್ತ್ರೀ ಸಮಾಜ'ವನ್ನು ಸ್ಥಾಪಿಸಿದರು. ಈ ಸಂಸ್ಥೆಯಲ್ಲಿ ಬಾಲಕಿಯರಿಗೆ ಶಿಕ್ಷಣ ಕೊಡಲು ನಿರ್ಧರಿಸಿದರು. ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳನ್ನು ಪ್ರಾರಂಭಿಸಿದರು. ಮಹಿಳೆಯರಿಗೂ ವಿಶೇಷ ತರಗತಿಗಳನ್ನು ನಡೆಸುತ್ತಿದ್ದರು. ಅವರ ಸಮಸ್ಯೆಗಳನ್ನು ಚರ್ಚಿಸುವುದಕ್ಕೆ 'ಸರಸ್ವತಿ' ಪತ್ರಿಕೆಯನ್ನು ೧೯೨೧ರಲ್ಲಿ ಪ್ರಾರಂಭಿಸಿದರು. ಹೀಗೆ ಕಲ್ಯಾಣಮ್ಮ ಕರ್ನಾಟಕದ ಕಣ್ಮಣಿಯಾದರು.

**ಪ್ರಶ್ನೆಗಳು:**

1. ಕಲ್ಯಾಣಮ್ಮನವರನ್ನು ಮೈಸೂರು ಸರ್ಕಾರ ಈ ಕೆಳಗಿನ_____________ ಸಭೆಗೆ ಸದಸ್ಯೆಯನ್ನಾಗಿ ನೇಮಿಸಿತು.
   A) ಲೋಕಸಭೆ B) ಪ್ರಜಾಪ್ರತಿನಿಧಿ ಸಭೆ C) ರಾಜ್ಯಸಭೆ D) ನ್ಯಾಯವಿಧಾಯಕ ಸಭೆ

2. ಕಲ್ಯಾಣಮ್ಮ ಅವರು ೧೯೧೩ರಲ್ಲಿ _________________ ವನ್ನು ಸ್ಥಾಪಿಸಿದರು.
   A) ಶ್ರೀ ಶಾರದ ಸ್ತ್ರೀ ಸಮಾಜ B) ಸರಸ್ವತಿ ಸ್ತ್ರೀ ಸಮಾಜ
   C) ಶ್ರೀ ಪಾರ್ವತಿ ಸ್ತ್ರೀ ಸಮಾಜ D) ಶ್ರೀ ಕಲ್ಯಾಣಮ್ಮ ಸ್ತ್ರೀ ಸಮಾಜ

3. ಕಲ್ಯಾಣಮ್ಮ ಅವರು ಪ್ರಾಥಮಿಕ ಶಿಕ್ಷಣವನ್ನು ಪಡೆದ ಶಾಲೆಯ ಹೆಸರು _________________
   A) ಪ್ರಗತಿ ಶಾಲೆ B) ಜೆ.ಎನ್.ವಿ ಶಾಲೆ C) ಸರ್ಕಾರಿ ಶಾಲೆ D) ಆರ್ಯಬಾಲಿಕಾ

4. ಕಲ್ಯಾಣಮ್ಮ ಅವರು 'ಮಕ್ಕಳಕೂಟ'ವನ್ನು ____________ ವರ್ಷದಲ್ಲಿ ಸ್ಥಾಪಿಸಿದರು.
   A) ೧೮೯೧ B) ೧೯೨೧ C) ೧೯೩೮ D) ೧೯೧೩

5. ಮಹಿಳೆಯರ ಸಮಸ್ಯೆಗಳನ್ನು ಚರ್ಚಿಸುವುದಕ್ಕೆ ಕಲ್ಯಾಣಮ್ಮ ಅವರು ಪ್ರಾರಂಭಿಸಿದ ಪತ್ರಿಕೆ __________
   A) ಶಾರದಾ B) ಸರಸ್ವತಿ C) ಕಲ್ಯಾಣಿ D) ಬೃಹಸ್ಪತಿ

**II. ಈ ಕೆಳಗೆ ಕೊಟ್ಟಿರುವ ಚೆನ್ನವೀರ ಕಣವಿರವರ 'ಗೆಳೆತನ' ಪಠಿತ ಪದ್ಯಭಾಗವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **(5X1=5)**

ಗೆಳೆತನದ ಸುವಿಶಾಲ ಆಲದಡಿ ಪಸರಿಸಿಹ
ತಣ್ಣೆಳಲ ತಂಪಿನಲಿ ತಂಗಿರುವೆನು;
ಜೀವನದನಂತ ದುರ್ಭರ ಬವಣೆ ನೋವುಗಳ
ಕಾವುಗಳ ಮೌನದಲಿ ನುಂಗಿರುವೆನು
ಗೆಳೆತನವೆ ಇಹಲೋಕಕಿರುವ ಅಮೃತ
ಅದನುಳಿದರೇನಿಹುದು-ಜೀವನ್ಮೃತ!

ಇಲ್ಲಿ ವಂಚನೆಯಿಲ್ಲ ಚಂಚಲತೆಯಿನಿತಿಲ್ಲ
ಮೇಲು ಕೀಳುಗಳೆಂಬ ಭೇದವಿಲ್ಲ
ಅಹಮಿಕೆಯ ನೆವವಿಲ್ಲ ದ್ವೇಷ ಗುಣಮಣಮಿಲ್ಲ
ಸಣ್ಣತನ ಸಂಕೋಚ ಮೊದಲಿಗಿಲ್ಲ
ಮನವು ಬಾನಗಲ, ಎದೆ ತಿಳಿಗೊಳದೊಲು
ಭಾವ ಶುದ್ಧ ಸ್ಫಟಿಕ - ಬೆಳದಿಂಗಳು!

ಉಪ್ಪಿಗಿಂತಲು ರುಚಿಯು ತಾಯಿಗಿಂತಲು ಬಂಧು
ಇಲ್ಲೆಂಬ ಗಾದೆನುಡಿ ಕೇಳಿರುವೆನು.
ಗೆಳೆತನದ ಶುಚಿರುಚಿಯು ಇದಕು ಮಿಗಿಲಾಗಿಹುದು
ಎಂಬ ಸಾಹಸ ಮಾಡೆ ದೋಷವೇನು?
ಕಂಡ ಕಂಡವರೇನು ಬಲ್ಲರಿದನು
ಉಂಡವನು ಕಂಡಿಹನು ಇದರ ಹದನು.

**ಪ್ರಶ್ನೆಗಳು:**

1. ಕವಿ ಮೌನದಲ್ಲಿ ಏನನ್ನು ನುಂಗಿದ್ದಾರೆ?
2. ಮೇಲು ಕೀಳುಗಳೆಂಬ ಭಾವನೆ ಯಾರಲ್ಲಿ ಇರುವುದಿಲ್ಲ?
3. ಗೆಳೆಯರ ಭಾವವನ್ನು ಕವಿ ಯಾವುದಕ್ಕೆ ಹೋಲಿಸಿದ್ದಾರೆ?
4. ಈ ಪದ್ಯದಲ್ಲಿರುವ ಗಾದೆ ಮಾತು ಯಾವುದು?
5. ಗೆಳೆತನದಲ್ಲಿ ಯಾವ ಗುಣಮಣವಿರುವುದಿಲ್ಲ?

**III. ಕೆಳಗೆ ನೀಡಲಾಗಿರುವ ವ್ಯಾಕರಣಾಂಶಗಳ ಬಹುಆಯ್ಕೆಯ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ:** **(5X1=5)**

1. 'ಕೂರ್ಪು' - ಪದದ ಸಮಾನಾರ್ಥಕ ಪದ ________________
   A) ಪ್ರೀತಿ B) ಗೌರವ C) ಸ್ನೇಹ D) ಗೆಳೆಯ

2. 'ಸಂದೇಹ'- ಈ ಪದದ ವಿರುದ್ಧ ಪದ______________
   A) ಅಸ್ಸಂದೇಹ B) ಅಪಸಂದೇಹ C) ನಿಸ್ಸಂದೇಹ D) ಅನಸಂದೇಹ

3. 'ಐಕ್ಯೆಕ' - ಪದವು ಕೆಳಗಿನ ____________ಸಂಧಿಗೆ ಉದಾಹರಣೆಯಾಗಿದೆ.
   A) ವೃದ್ಧಿ ಸಂಧಿ B) ಸವರ್ಣದೀರ್ಘ ಸಂಧಿ C) ಯಣ್ ಸಂಧಿ D) ಗುಣ ಸಂಧಿ

4. 'ಕವಿ' -ಈ ಪದದ ತದ್ಭವ ರೂಪ:
   A) ಕಾವ್ಯ B) ಕಬ್ಬಿಗ C) ಕಬ್ಬ D) ಕವನ

5. ವಿದ್ಯಾರ್ಥಿಗಳು <u>ಮೈದಾನದಲ್ಲಿ</u> ಆಟವಾಡಿದರು.-ಗೆರೆ ಎಳೆದ ಪದದ ವಿಭಕ್ತಿ__________
   A) ಪ್ರಥಮಾ B) ತೃತೀಯಾ C) ಷಷ್ಠೀ D) ಸಪ್ತಮೀ

**IV. ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿ:** **(3X1=3)**

1. 'ಭಕ್ತನು ದೇವಾಲಯದಲ್ಲಿ ಭಕ್ತಿಯಿಂದ ಭಜನೆ ಮಾಡುತ್ತಿದ್ದನು'- ವಚನ ಬದಲಿಸಿ ಬರೆಯಿರಿ.
2. 'ಮಾಲಿನಿಯು ನದಿಯನ್ನು ದಾಟುವಳು'. - ವರ್ತಮಾನ ಕಾಲದಲ್ಲಿ ಬರೆಯಿರಿ.
3. 'ಪೂರೈಸು' – ಈ ಪದವನ್ನು ಬಳಸಿ ಸ್ವಂತ ವಾಕ್ಯವನ್ನು ರಚಿಸಿರಿ.

**V. ನಿಮ್ಮ ಬಡಾವಣೆಯಲ್ಲಿ ಒಂದು ಉದ್ಯಾನವನ್ನು ಸ್ಥಾಪಿಸುವಂತೆ ಕೋರಿ ಬಿ.ಬಿ.ಎಂ.ಪಿ. ಅಧಿಕಾರಿಗಳಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.** **(1X4=4)**

**VI. ನಿಮ್ಮ ಶಾಲೆಯಲ್ಲಿ ನಡೆದ ವಾರ್ಷಿಕೋತ್ಸವವನ್ನು ಕುರಿತು ಒಂದು ವರದಿಯನ್ನು ತಯಾರಿಸಿ.** **(1X4=4)**

**VII. ಕೆಳಗಿನ ಪ್ರಶ್ನೆಗಳಿಗೆ ಎರಡು- ಮೂರು ವಾಕ್ಯಗಳಲ್ಲಿ ಉತ್ತರಿಸಿ.** **(4X2=8)**

1. ಬುದ್ಧಿ ಹೀನರು ಹೇಗೆ ವಿದ್ಯೆಯನ್ನು ಸಂಪಾದಿಸುತ್ತಾರೆ?
2. ಶರಣರು ಕೆಡಿಸುವ ನಿದ್ರೆಯನ್ನು ಹೇಗೆ ಗೆದ್ದಿದ್ದಾರೆ? ಶಿವಶರಣೆ ಲಿಂಗಮ್ಮನ ಅಂಕಿತನಾಮವೇನು?
3. ಶಿವನ ಸಮುದ್ರದಲ್ಲಿ ಸುಬ್ರಹ್ಮಣ್ಯಮ್ ಮಾಡಿದ ವ್ಯವಸ್ಥೆಗಳಾವುವು?
4. ಚೋಳರ ಸಾಧನೆಯೇನು?

**VIII. ಕೆಳಗಿನ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ.** **(2X3=6)**

1. ವೈದ್ಯೇಶ್ವರ ದೇವಾಲಯದ ನಿರ್ಮಾಣದ ಕಾಲನಿರ್ಣಯಕ್ಕೆ ಸಹಕಾರಿಯಾಗುವ ಅಂಶಗಳಾವುವು?
2. ಅರಿವು, ಆಚಾರ, ಸಮ್ಯಜ್ಞಾನದ ಬಗ್ಗೆ ಅಮುಗೆರಾಯಮ್ಮನ ಅನಿಸಿಕೆ ಏನು?

**IX. ಕೆಳಗಿನ ಪ್ರಶ್ನೆಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.** **(2X3=6)**

1. “ಮೋಟಾರು ಓಡಲೊಲ್ಲದು, ಸಾರಥಿ ನಿಲ್ಲಿಸಲಾರನು”

**ಅಥವಾ**

“ಸುತ್ತಣ ಲೋಕವೆಲ್ಲ ಮಲಗಿಕೊಂಡಿದೆ”

2. “ಬಾಳುವರು ಗಂಧದೊಲು ಜೀವ ತೆಯ್ದು!”

**ಅಥವಾ**

“ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾ ಬೆರಗಾದೆ”

**X. ಕೆಳಗಿನ ಪ್ರಶ್ನೆಗಳಿಗೆ ಎಂಟು- ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** **(1X4=4)**

1. ಸಳನ ವಂಶಕ್ಕೆ 'ಹೊಯ್ಸಳ' ಹೆಸರು ಬರಲು ಕಾರಣವೇನು?

**ಅಥವಾ**

ವಚನಾಮೃತದಲ್ಲಿ ವ್ಯಕ್ತವಾಗಿರುವ 'ಕಾಯಕ ತತ್ವದ' ಮಹತ್ವವನ್ನು ವಿವರಿಸಿ.

********************